ಕ್ಷಮೆಯನ್ನು ಬೇಡುತ್ತೇನೆ. ಶರ್ಮಿಳಾ ಏನೂ ವೈರತ್ವ ಸಾಧಿಸುವ ವ್ಯಕ್ತಿಯಲ್ಲ... ಅವಳು ಹಾಗಿರುವುದೇನೋ ನಿಜ; ಆದರೆ ಅವಳ ತಂದೆತಾಯಿ ನನ್ನ ಮೇಲೆ ದ್ವೇಷ ಸಾಧಿಸಲು ಅವಳಿಗೆ ಒತ್ತಾಯ ಮಾಡಿದರೆ ಹೇಗೆ?... ಅವಳು ಹಿಂದೂ ಎಂಬುದೇನೋ ನನಗೆ ಗೊತ್ತು. ಆದರೆ ತಾನು ಅವಳಿಂದ ಬೇರೆ ಎಂಬ ಭಾವನೆ ಬರಲಾರದಷ್ಟು ತಾವಿಬ್ಬರೂ ಹತ್ತಿರವಾಗಿದ್ದವರು. ಅಷ್ಟಕ್ಕೂ, ತಾನು ತಿನ್ನುವುದನ್ನು ಅವಳೂ ತಿಂದರೆ ಅದು ಪಾಪವಾಗುತ್ತದೆಯೆಂದು ತನಗೆ ಎಂದೂ, ಯಾರೂ ಹೇಳಿಲ್ಲ. ಹಾಗೆ ಯಾರಾದರೂ ಹೇಳಿದ್ದರೂ ತಾನು ಅದನ್ನು ನಂಬುತ್ತಿದ್ದನೆ? ಅವಳಾಗಿಯೇ ಬರ್ಗರ್ ಅನ್ನು ಇಷ್ಟಪಡದಿದ್ದರೆ ತಾನು ಅದನ್ನು ಅರ್ಥಮಾಡಿಕೊಳ್ಳಬಹುದಿತ್ತು. ಆದರೆ, ಶರ್ಮಿಳಾ ಬರ್ಗರ್ ಅನ್ನು ಬರೀ ಇಷ್ಟಪಟ್ಟು ತಿಂದದ್ದಷ್ಟೇ ಅಲ್ಲ; ಅದರ ರುಚಿಯನ್ನು ಮನಸಾರೆ ಹೊಗಳಿದಳು ಕೂಡ. ಬರ್ಗರ್ ತಿನ್ನುವಾಗ ಅವಳು ಖುಷಿಪಟ್ಟದ್ದನ್ನು ತಾನು ಅಮ್ಮನಿಗೂ ಹೇಳಿದ್ದೇನೆ. ಶರ್ಮಿಳಾ ಕೂಡ ತನ್ನ ತಾಯಿಗೆ ಅದರ ರುಚಿಯ ಬಗ್ಗೆ ಹೇಳಿರಲೂಬಹುದು. ಅಷ್ಟೇ ಅಲ್ಲ, ಅವಳ ತಾಯಿ, ಅದು ಯಾವುದರ ಬರ್ಗರ್? ಎಂದು ಕೇಳಿರಲೂ ಸಾಕು. ಶರ್ಮಿಳಾ ಆ ಪ್ರಶ್ನೆಗೆ ಏನು ಉತ್ತರ ಕೊಟ್ಟಳೊ!! ಅವಳ ತಾಯಿ ಏನು ತಿಳಿದುಕೊಂಡಳೊ!! ಶರ್ಮಿಳಾ ಅಂದರೆ ಅವಳ ತಂದೆಗೆ ತುಂಬ ಪ್ರೀತಿ. ಹಾಗಿರುವಾಗ ಅವಳು ಇಂಥ ಪಾಪ ಮಾಡಿದ್ದು ಅವರಿಗೆ ಗೊತ್ತಾದರೆ ಅವರು ಸುಮ್ಮನಿದ್ದಾರೆಯೆ?... ಅವರು ಶರ್ಮಿಳಾಳನ್ನು ಹೇಗೆ ಶಿಕ್ಷಿಸಬಹುದು?'

**'ಫಾದರ್, ನಿನ್ನೆ ನಾವು ಶಾಲೆಯ ವತಿಯಿಂದ ವನಭೋಜನಕ್ಕೆ ಹೋಗಿದ್ದೆವು. ನನ್ನ ಗೆಳತಿ ಶರ್ಮಿಳಾ ನನ್ನೊಂದಿಗಿದ್ದಳು. ನಾನು ಒಯ್ದಿದ್ದ ಗೋಮಾಂಸದ ಬರ್ಗರನ್ನು ಅವಳಿಗೆ ಕೊಟ್ಟೆ. ಅವಳು ಅದನ್ನು ತಿಂದಳು. ಹಿಂದೂಗಳು ಗೋಮಾಂಸ ತಿನ್ನುವುದಿಲ್ಲವೆಂದು ನನಗೆ ಗೊತ್ತಿರಲಿಲ್ಲ. ಅದಕ್ಕಾಗಿ ನಾನು ತಪ್ಪು ಮಾಡಿಬಿಟ್ಟೆ. ಫಾದರ್ ನನ್ನನ್ನು ಕ್ಷಮಿಸಿರಿ.'**

ಆಳವಾದ ಚಿಂತೆಯಲ್ಲಿ ಮುಳುಗಿದ ಇರ್ನೆ ಅದರಿಂದ ಹೊರಬಂದದ್ದು ತಾಯಿ ಕಕ್ಕುಲಾತಿಯಿಂದ ಮಾತನಾಡಿಸಿದಾಗಲೆ.

"ಇರ್ನೆ, ಏನಾಗಿದೆ ಮಗಳೆ ನಿನಗೆ? ಮುಂಜಾನೆ ನೀನು ಬರ್ಗರನ್ನೂ ತಿನ್ನಲಿಲ್ಲ. ಈಗ ನೋಡಿದರೆ, ನಿನಗೆ ಮಧ್ಯಾಹ್ನದ ಊಟ ಮಾಡಲೂ ಮನಸ್ಸಿದ್ದಂತಿಲ್ಲ?..."

ತಾಯಿಗೆ ಬೇಸರವಾಗದಿರಲೆಂದು ಇರ್ನೆ ಏನೋ ಒಂದಿಷ್ಟು ತಿಂದಂತೆ ಮಾಡಿದಳು. ಅಂದು ಅರ್ಧ ದಿನ ರಜೆಯಿದ್ದ ಕಾರಣ ತಂದೆ ಅಷ್ಟೊತ್ತಿಗಾಗಲೇ ಮನೆಗೆ ಬಂದಿದ್ದರು. ಅವರು ಇನ್ನೇನು ಊಟ ಮಾಡಬೇಕೆನ್ನುವಷ್ಟರಲ್ಲಿಯೇ ಇರ್ನೆಯ ತಾಯಿ–

"ನೋಡಿ, ಇವಳು ನಿನ್ನೆ ತನ್ನ ಹಿಂದೂ ಗೆಳತಿಗೆ ಗೋಮಾಂಸದ ಬರ್ಗರನ್ನು ತಿನ್ನಲು ಕೊಟ್ಟೆ ಎಂಬ ಕಾರಣಕ್ಕಾಗಿ ಇವತ್ತು ಮಂಕು ಹಿಡಿದವರಂತೆ ಕುಳಿತುಬಿಟ್ಟಿದ್ದಾಳೆ" ಎಂದು ಅಹವಾಲು ಹೇಳಿದರು. ಅದಕ್ಕೆ ಅವಳ ತಂದೆ ನಗುತ್ತ–